# ಶ್ರೀರಾಮಕೃಷ್ಣ ವಚನವೇದದಿಂದ



## ಸಮಾಧಿ

[ಪರಮಹಂಸರ ಸುತ್ತಲೂ ಪ್ರಾಪಂಚಿಕರೆ; ಯಾವಕಡೆಗೆ ಕಣ್ಣು ಹಾಯಿಸಿದರೂ ಕಾಮಕಾಂಚನದ ದರ್ಶನವೆ. ಸುತ್ತಮುತ್ತಲಿನ ಸ್ಥಿತಿ ಹೀಗಿದ್ದರೂ ಪರಮಹಂಸರ ಮನಸ್ಸು ಸತತವಾಗಿ ಭಾವ ಮತ್ತು ಸಮಾಧಿಯಲ್ಲಿ ಮುಳುಗಿಹೋಗಿದೆ. ಇದಕ್ಕಾಗಿಯೇ ಪ್ರತಾಪಚಂದ್ರ ಮಜುಮದಾರ ಪರಮಹಂಸರ ಸಮಾಧಿ ಅವಸ್ಥೆಯನ್ನು ನೋಡಿ ಹೇಳಿದ, 'ಏನಪ್ಪ ಇದು! ಸಮಾಧಿ ಇವರನ್ನು ಪಿಶಾಚಿಯ ಹಾಗೆ ಹಿಡಿದುಕೊಂಡಿದೆಯಲ್ಲ!' ಅಂತ. ಆ ಸಮಾಧಿಯ ಅವಸ್ಥೆಯನ್ನು ಪರಮಹಂಸರ ಬಾಯಲ್ಲೇ ಕೇಳಬೇಕು.]

**ಯಾ**ವ ಅವಸ್ಥೆಯಲ್ಲಿ ಮನಸ್ಸು ಬ್ರಹ್ಮನಲ್ಲಿ ಲಯವಾಗುವುದೋ ಆ ಅವಸ್ಥೆಗೆ 'ಸಮಾಧಿ' ಅಂತ ಹೆಸರು. ಜ್ಞಾನಿಗೆ ಜಡಸಮಾಧಿ ಉಂಟಾಗುತ್ತದೆ. ಆಗ 'ಅಹಂ' ಇರದು. ಭಕ್ತಿಯೋಗದ ಮೂಲಕ ದೊರೆಯುವ ಸಮಾಧಿಗೆ 'ಚೇತನ ಸಮಾಧಿ' ಅಂತ ಹೆಸರು.

ಜಗನ್ಮಾತೆಯನ್ನು ಸಾಕ್ಷಾತ್ಕಾರ ಮಾಡಿಕೊಂಡರೆ, ಭಕ್ತಿಯೂ ದೊರೆಯುತ್ತದೆ, ಜ್ಞಾನವೂ ದೊರೆಯುತ್ತದೆ. ಭಾವಸಮಾಧಿಯಲ್ಲಿ ಭಗವದ್ರೂಪದರ್ಶನ ದೊರೆಯುತ್ತದೆ. ನಿರ್ವಿಕಲ್ಪ ಸಮಾಧಿಯಲ್ಲಿ ಅಖಂಡ ಸಚ್ಚಿದಾನಂದ ಬ್ರಹ್ಮನ ಸಾಕ್ಷಾತ್ಕಾರವಾಗುತ್ತದೆ. ನಿರ್ವಿಕಲ್ಪ ಸಮಾಧಿಯಲ್ಲಿ 'ಅಹಂ' ಎಂಬುದು, ನಾಮರೂಪ ಇವೆಲ್ಲ ಇರುವುದಿಲ್ಲ.

ಚೈತನ್ಯದೇವನಿಗೆ ಮೂರು ಅವಸ್ಥೆ ಉಂಟಾಗುತ್ತಿತ್ತು. ಮೊದಲನೆಯದು ಬಾಹ್ಯದಶೆ. ಆಗ ಆತನ ಮನಸ್ಸು ಸ್ಥೂಲ ಮತ್ತು ಸೂಕ್ಷ್ಮಗಳ ಮೇಲೆ ನೆಲಸಿರುತ್ತಿತ್ತು. ಎರಡನೆಯದು ಅರ್ಧ ಬಾಹ್ಯದಶೆ. ಆಗ ಆತನ ಮನಸ್ಸು ಕಾರಣಶರೀರವನ್ನು ಹೊಕ್ಕು, ಕಾರಣಾನಂದದಲ್ಲಿ ಮಗ್ನವಾಗಿರುತ್ತಿತ್ತು. ಮೂರನೆಯದು ಅಂತರ್ದಶೆ. ಆಗ ಆತನ ಮನಸ್ಸು ಮಹಾಕಾರಣದಲ್ಲಿ ಲಯವಾಗಿಬಿಡುತ್ತಿತ್ತು.

ವೇದಾಂತದ ಪಂಚಕೋಶಗಳೊಡನೆ ಈ ಅವಸ್ಥೆಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಸ್ಥೂಲಶರೀರವೆಂದರೆ, ಅನ್ನಮಯ ಕೋಶ ಮತ್ತು ಪ್ರಾಣಮಯಕೋಶ. ಸೂಕ್ಷ್ಮಶರೀರವೆಂದರೆ ಮನೋಮಯ ಕೋಶ ಮತ್ತು ವಿಜ್ಞಾನಮಯಕೋಶ. ಕಾರಣಶರೀರವೆಂದರೆ, ಆನಂದಮಯಕೋಶ. ಮಹಾಕಾರಣ ಪಂಚಕೋಶಗಳಿಗೆ ಅತೀತವಾದ್ದು. ಚೈತನ್ಯದೇವನ ಮನಸ್ಸು ಮಹಾಕಾರಣದಲ್ಲಿ ಲಯವಾದಾಗ ಆತನಿಗೆ ಸಮಾಧಿಯುಂಟಾಗುತ್ತಿತ್ತು. ಅದಕ್ಕೆ ನಿರ್ವಿಕಲ್ಪ ಸಮಾಧಿ ಅಥವಾ ಜಡಸಮಾಧಿ ಎಂದು ಹೆಸರು.

ಈ ಮಾಯಾಕಲ್ಪಿತ ಜೀವಜಗತ್ತನ್ನು ದಾಟಿದ ಒಡನೆಯೇ, ನಿತ್ಯನಾದವನ್ನು ಭೇದಿಸಿದೊಡನೆಯೇ ಸಮಾಧಿ. ಓಂಕಾರ ಸಾಧನೆ ಮಾಡುತ್ತಾ ನಾದಭೇದವಾಗಿ ಬಿಡುತ್ತದೆ; ಸಮಾಧಿ ಉಂಟಾಗುತ್ತದೆ. ಕೀಟ ಭ್ರಮರದ ಮೇಲೆ ಚಿಂತಿಸುತ್ತ ಕೊನೆಗೆ ಭ್ರಮರವೇ ಆಗಿಬಿಡುತ್ತದೆ ಎಂಬುದನ್ನು ನೀವು ಕೇಳಿರಬೇಕು. ನನಗೆ ಆಗ ಹೇಗೆ ಅನ್ನಿಸುತ್ತಿತ್ತು ಗೊತ್ತೆ? ಪಾತ್ರೆಯಲ್ಲಿ ಇಟ್ಟ ಮೀನನ್ನು ಗಂಗೆಗೆ ಬಿಟ್ಟರೆ ಅದಕ್ಕೆ ಹೇಗೋ ಹಾಗೆ.

ಕೆಲವು ವೇಳೆ ಭಗವಂತ ಕಿಂಚಿತ್ 'ಅಹಂ'ಅನ್ನೂ ನಿರ್ಮೂಲ ಮಾಡಿಬಿಡುತ್ತಾನೆ. ಆಗ ನಿರ್ವಿಕಲ್ಪ ಸಮಾಧಿ, ಜಡಸಮಾಧಿ ಉಂಟಾಗುತ್ತದೆ. ಆಗ ದೊರೆಯುವ ಅನುಭವವನ್ನು ಬಾಯಿಂದ ಹೇಳಲಾಗುವುದಿಲ್ಲ. ಒಂದು ಉಪ್ಪಿನ ಬೊಂಬೆ ಸಮುದ್ರದ ಆಳ ಕಂಡುಹಿಡಿಯಲು ಹೋಯಿತು. ಸ್ವಲ್ಪ ಇಳಿಯುವುದರೊಳಗೇ ಅದು ಕರಗಿಹೋಯಿತು. ಸಮುದ್ರದೊಡನೆ ಒಂದಾಗಿಬಿಟ್ಟಿತು. ಆಗ ಸಮುದ್ರದ ಹೊರಕ್ಕೆ ಬಂದು ಸಮುದ್ರ ಎಷ್ಟು ಆಳ ಎಂಬುದನ್ನು ತಿಳಿಸಲು ಯಾರು ತಾನೆ ಉಳಿದುಕೊಂಡಿರುತ್ತಾರೆ?

ನಾವು ಯಾವುದಾದರೂ ಒಂದು ವಸ್ತುವನ್ನು ನೋಡಬೇಕಾದರೆ ನಮಗೆ ಎಷ್ಟೊಂದು ವಸ್ತುಗಳ ಆವಶ್ಯಕತೆ ಇದೆ ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿ. ನಮಗೆ ಕಣ್ಣು ಬೇಕು; ಬೆಳಕು ಬೇಕು; ಮನಸ್ಸು ಬೇಕು; ಈ ಮೂರರಲ್ಲಿ ಯಾವುದೊಂದು ಇಲ್ಲದಿದ್ದರೂ ವಸ್ತುವನ್ನು ನೋಡಲಿಕ್ಕಾಗುವುದಿಲ್ಲ. ಈ ಮನಸ್ಸೆಂಬುದು ಎಲ್ಲಿಯವರೆಗೆ ಕೆಲಸ ಮಾಡಿಕೊಂಡು ಮುಂದುವರಿಯುತ್ತಿರುವುದೊ, ಅಲ್ಲಿಯವರೆಗೆ ಈ ಜಗತ್ತೆಂಬುದು ಇಲ್ಲ, ನಾನು ಎಂಬುದು ಇಲ್ಲ ಅಂತ ಹೇಳಲಾದೀತೆ? ಮನಸ್ಸು ನಾಶವಾಗಿ ಹೋದರೆ, ಸಂಕಲ್ಪ ವಿಕಲ್ಪ ನಿಂತುಹೋದರೆ ಸಮಾಧಿಯುಂಟಾಗುತ್ತದೆ. ಬ್ರಹ್ಮಜ್ಞಾನ ದೊರೆಯುತ್ತದೆ.

ಕುಲಕುಂಡಲಿನೀ ಜಾಗೃತವಾಗದ ಹೊರತು ಆತ್ಮಜಾಗೃತಿಯುಂಟಾಗದು. ಅದು ಎಚ್ಚರಗೊಂಡರೆ, ಸುಷುಮ್ನ ನಾಡಿಯ ಮೂಲಕ ಹರಿಯಲಾರಂಭಿಸಿ ಸ್ವಾಧಿಷ್ಠಾನ, ಮಣಿಪುರ ಇವೇ ಮೊದಲಾದ ಚಕ್ರಗಳನ್ನು ಭೇದಿಸಿ ಕೊನೆಗೆ ಶಿರಸ್ಸಿನ ಮಧ್ಯಪ್ರದೇಶವನ್ನು ಮುಟ್ಟುತ್ತದೆ. ಇದಕ್ಕೇನೆ ಮಹಾವಾಯುವಿನ ಗತಿ ಅಂತ ಹೆಸರು. ಕೊನೆಗೆ ಇದು ಸಮಾಧಿಯಲ್ಲಿ ಪರಿಸಮಾಪ್ತಿಯಾಗುತ್ತದೆ.

**ಬ್ರಹ್ಮ ಸತ್ಯಂ ಜಗನ್ಮಿಥ್ಯಾ** ಎಂಬ ವಿಚಾರದ ಕೊನೆಯಲ್ಲಿ ಸಮಾಧಿ ದೊರೆಯಿತು ಅಂದರೆ ರೂಪ ಒಮ್ಮೆಗೇ ಅದೃಶ್ಯವಾಗಿಬಿಡುತ್ತದೆ. ಜ್ಞಾನ-ವಿಚಾರದ ಅಂತ್ಯದಲ್ಲಿ ದೊರೆಯುವ ಸಮಾಧಿಯಲ್ಲಿ 'ಅಹಂ' ಏನೂ ಉಳಿದುಕೊಂಡಿರದು. ಆದರೆ ಸಮಾಧಿಯನ್ನು ದೊರಕಿಸಿಕೊಳ್ಳುವುದು ಬಹಳ ಪ್ರಯಾಸವೆ. 'ಅಹಂ' ಎಂಬುದು ಒಡಪಟ್ಟಿಗೆ ನಮ್ಮನ್ನು ಬಿಟ್ಟು ತೊಲಗಲೊಲ್ಲದು. ಈ ಕಾರಣದಿಂದಲೇ ಮನುಷ್ಯ ಈ ಜಗತ್ತಿನಲ್ಲಿ ಮತ್ತೆ ಮತ್ತೆ ಜನ್ಮವೆತ್ತುತ್ತಿರುವುದು. ✤